India Media Monitor

# Vijaya Karnataka

## Doctors demand more medical seats

**Date: 30/07/2013 | Edition: Bangalore | Page: 3 | Source: Bureau | Clip size (cm): W: 16 H: 15**

**Clip: 1 of 1**

'ವೈದ್ಯರನ್ನು ರಕ್ಷಿಸಿ' ಅಭಿಯಾನಕ್ಕೆ ಡಾ. ದೇವಿಶೆಟ್ಟಿ ಚಾಲನೆ

# ವೈದ್ಯಕೀಯ ಸೀಟು ಹೆಚ್ಚಿಸಲು ಆಗ್ರಹ

**ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯ ಸ್ನಾತಕೋತ್ತರ ಪದವಿ ಅವಧಿಯಲ್ಲೇ ಆರು ತಿಂಗಳ ಗ್ರಾಮೀಣ ಸೇವೆಯನ್ನು ಸಹ ಸೇರ್ಪಡೆ ಮಾಡಬೇಕು ಎಂದು ನಾರಾಯಣ ಹೃದಯಾಲಯದ ಸಂಸ್ಥಾಪಕ ಡಾ. ದೇವಿಶೆಟ್ಟಿ ಒತ್ತಾಯಿಸಿದರು.

ಭಾರತೀಯ ಆರೋಗ್ಯ ಸೇವೆ ಪೂರೈಕೆದಾರರ ಸಂಘವು (ಎಎಚ್‌ಪಿಐ) ನಗರದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ವೈದ್ಯರನ್ನು ರಕ್ಷಿಸಿ' ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

"ಅಮೆರಿಕದಲ್ಲಿ ತಜ್ಞ ವೈದ್ಯರಾಗಲು 8 ವರ್ಷಗಳ ಕಾಲ ತರಬೇತಿ ಪಡೆದರೆ ಸಾಕು. ಆದರೆ, ಭಾರತದಲ್ಲಿ 10 ವರ್ಷ ಬೇಕಿದೆ. ಇದರಿಂದಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಉಂಟಾಗಿದೆ. ಬಡ ಕುಟುಂಬದ ವಿದ್ಯಾರ್ಥಿಗಳು ಮತ್ತು ರೋಗಿಗಳು ತೀವ್ರ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಹಾಗಾಗಿ ಗ್ರಾಮೀಣ ಸೇವೆಯನ್ನು ಒಂದು ವರ್ಷದ ಬದಲಿಗೆ ಆರು ತಿಂಗಳಿಗೆ ಸೀಮಿತಗೊಳಿಸಬೇಕು. ಇದನ್ನು ಸ್ನಾತಕೋತ್ತರ ಕೋರ್ಸ್ ಕಾಲಾವಧಿಯಲ್ಲೇ ಸೇರಿಸಬೇಕು," ಎಂದರು.

"ದೇಶದಲ್ಲಿ ವೈದ್ಯರ ಕೊರತೆ ತೀವ್ರವಾಗಿದೆ. ಸ್ನಾತಕೋತ್ತರ ಸೀಟುಗಳ ಸಂಖ್ಯೆ ಕಡಿಮೆ ಇರುವುದೇ ಇದಕ್ಕೆ ಕಾರಣ. ಹಾಗಾಗಿ, ಎಂಬಿಬಿಎಸ್ ಪದವಿ ಕೋರ್ಸ್‌ಗೆ ಸಮಾನಾಂತರವಾಗಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಸೀಟುಗಳನ್ನು ಹೆಚ್ಚಳ ಮಾಡಬೇಕು. ಹೃದಯ ತೊಂದರೆ, ಕ್ಯಾನ್ಸರ್, ಕಿಡ್ನಿ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವಂತಹ ತಜ್ಞ ವೈದ್ಯರೇ ನಮ್ಮಲ್ಲಿಲ್ಲ. ಹಾಗಾಗಿ ಪದವಿಗೆ ಪೂರಕವಾಗಿ ಸ್ನಾತಕೋತ್ತರ ಪದವಿ ಸೀಟುಗಳನ್ನು ಹೆಚ್ಚಿಸಿದರೆ, ತಜ್ಞರ ವೈದ್ಯರ ಕೊರತೆ ನೀಗಲಿದೆ," ಎಂದು ಹೇಳಿದರು.

ಭಾರತೀಯ ವೈದ್ಯ ಸಂಘದ ಕಾರ್ಯದರ್ಶಿ ನರೇಂದ್ರ ಸೇನ್ ಮಾತನಾಡಿ "ಜನರಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಬೇಕಾದ ಅಗತ್ಯವಿದೆ. ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 2468 ಮಂದಿ ವೈದ್ಯರ ಅಭಾವವಿದೆ. ಪ್ರತಿ ವರ್ಷ 12 ಸಾವಿರ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿಗೆ ಪ್ರವೇಶ ಕಲ್ಪಿಸುತ್ತಿಲ್ಲ. ಹಾಗಾಗಿ, ವೈದ್ಯರ ಕೊರತೆ ಉಂಟಾಗುತ್ತಿದೆ," ಎಂದರು.

ಎಎಚ್‌ಪಿಐ ಉಪಾಧ್ಯಕ್ಷ ಅಲೆಕ್ಸ್ ಥಾಮಸ್, ಅಭಿಯಾನದ ಸಂಚಾಲಕ ಡಾ. ನವನೀತ್ ಮೊತ್ರೆಜಾ, ಡಾ. ನರೇಶ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ವಿ.ಕ ಚಿತ್ರಲೋಕ




ಭಾರತೀಯ ಆರೋಗ್ಯ ಸೇವೆ ಪೂರೈಕೆದಾರರ ಸಂಘವು (ಎಎಚ್‌ಪಿಐ) ನಗರದಲ್ಲಿ ಸೋಮವಾರ ಆಯೋಜಿಸಿದ್ದ 'ವೈದ್ಯರನ್ನು ರಕ್ಷಿಸಿ' ಅಭಿಯಾನಕ್ಕೆ ಚಾಲನೆ ನೀಡಿದ ಡಾ. ದೇವಿಶೆಟ್ಟಿ.